## 16. ಜಸ್ವಂತ್ ಸಿಂಗ್, ಮಾಜಿ ರಕ್ಷಣಾ ಸಚಿವರು

ಬಿಜೆಪಿಯ ಸಂಸ್ಥಾಪಕ ಸದಸ್ಯ, ಕೇಂದ್ರದ ಮಾಜಿ ರಕ್ಷಣಾ ಸಚಿವ ಜಸ್ವಂತ್ ಸಿಂಗ್(82) ಕೊನೆಯುಸಿರೆಳೆದರು.

ಸೇನಾಧಿಕಾರಿಯಾಗಿ, ಲೇಖಕರಾಗಿ, ಕೇಂದ್ರ ಸಚಿವರಾಗಿ ಹೀಗೆ ತಮ್ಮ ಜೀವನ ಪಥದಲ್ಲಿ ಹಲವು ಹುದ್ದೆಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದವರು 'ನಿಷ್ಠುರ ರಾಜಕಾರಣಿ' ಜಸ್ವಂತ್ ಸಿಂಗ್. ಅದರಲ್ಲೂ 1999ರಲ್ಲಿ ನಡೆದಿದ್ದ ಕಂದಹಾರ್ ಅಪಹರಣ ಬಿಕ್ಕಟ್ಟನ್ನು ವಿದೇಶಾಂಗ ಸಚಿವರಾಗಿ ಸಿಂಗ್ ನಿಭಾಯಿಸಿದ ರೀತಿ ಎಲ್ಲದಕ್ಕಿಂತಲೂ ಪ್ರಮುಖ. ಘಟನೆಗೆ ಸಂಬಂಧಿಸಿದಂತೆ ಅವರ ಪಾತ್ರ ತೆಗೆದುಕೊಂಡ ನಿರ್ಧಾರ ಇಂದಿಗೂ ಚರ್ಚೆ ಹಾಗೂ ವಿಶ್ಲೇಷಣೆಗೆ ಕಾರಣವಾಗಿದೆ. 1999ರ ಕ್ರಿಸ್‌ಮಸ್ ಮುನ್ನಾದಿನ ಸಂಜೆ ದೆಹಲಿಗೆ ಹೊರಟಿದ್ದ 161 ಪ್ರಯಾಣಿಕರಿದ್ದ ಇಂಡಿಯನ್ ಏರ್‌ಲೈನ್ಸ್ (ಐಸಿ 814) ವಿಮಾನವನ್ನು ಕಠ್ಮಂಡುವಿನಿಂದ ಅಪಹರಿಸಿ ಅಫ್ಘಾನಿಸ್ಥಾನದ ಕಂದಹಾರ್‌ಗೆ ಕೊಂಡೊಯ್ಯಲಾಗಿತ್ತು.

ಜೈಶ್ ಎ ಮೊಹಮ್ಮದ್ ಉಗ್ರ ಸಂಘಟನೆ ಮುಖ್ಯಸ್ಥ ಮಸೂದ್ ಅಜರ್ ಸೇರಿದಂತೆ ಮೂವರು ಉಗ್ರರ ಜೊತೆ ಅಪಹರಣಕಾರರ ಜೊತೆ ಸಂಧಾನಕ್ಕೆ ಸಿಂಗ್ ಕಂದಹಾರ್‌ಗೆ ತೆರಳಿದ್ದರು. ಉಗ್ರರನ್ನು ಖುದ್ದಾಗಿ ಕರೆದೊಯ್ದಿದ್ದಕ್ಕಾಗಿ ಸಿಂಗ್ ಸಾಕಷ್ಟು ಟೀಕೆಗೆ ಒಳಗಾಗಿದ್ದರು. 'ಪ್ರಯಾಣಿಕರ ಬಿಡುಗಡೆಗಾಗಿ ಉಗ್ರರನ್ನು ಹಸ್ತಾಂತರಿಸುವ ನಿರ್ಧಾರ ಬಹಳ ಕಠಿಣವಾಗಿತ್ತು. ಮೊದಲಿಗೆ ಯಾವುದೇ ಒಪ್ಪಂದಕ್ಕೆ ಸಿದ್ಧವಿರಲಿಲ್ಲ. ಆದರೆ ಸಮಯ ಉರುಳಿದಂತೆ ನಿರ್ಧಾರ ಬದಲಾಯಿತು' ಎಂದು ತಮ್ಮ ಪುಸ್ತಕದಲ್ಲಿ ಸಿಂಗ್ ಉಲ್ಲೇಖಿಸಿದ್ದರು.

ವಿದೇಶಾಂಗ ಸಚಿವರಾಗಿ ಸಿಂಗ್ ಕಾರ್ಯನಿರ್ವಹಿಸಿದ 1998ರಿಂದ 2002ರ ಅವಧಿಯೇ ಹೆಚ್ಚಿನ ಚರ್ಚೆಗೆ ಒಳಗಾಗಿದೆ. ಕಾರ್ಗಿಲ್ ಯುದ್ಧ, ಅಣುಬಾಂಬ್ ಪರೀಕ್ಷೆಯ ಬಳಿಕ ಪಾಶ್ಚಿಮಾತ್ಯ ರಾಷ್ಟ್ರಗಳಿಂದ ನಿರ್ಬಂಧ, ಸಂಸತ್ ಮೇಲೆ ಉಗ್ರರ ದಾಳಿ ಹೀಗೆ ನಿರಂತರವಾದ ಬಿಕ್ಕಟ್ಟಿನ ನಡುವೆಯೂ ಭಾರತವನ್ನು ಯಶಸ್ವಿಯಾಗಿ ಸಿಂಗ್ ಮುನ್ನಡೆಸಿದ್ದರು.

ರಾಜಕೀಯ ವಲಯದಲ್ಲಿ ಎಲ್ಲರೊಂದಿಗೂ ಸಿಂಗ್ ಉತ್ತಮ ಒಡನಾಟ ಹೊಂದಿದ್ದರು. ಆದರೆ, ತಮ್ಮ ಅಭಿಪ್ರಾಯಗಳನ್ನು ಎಂದಿಗೂ ಮುಚ್ಚಿಡುತ್ತಿರಲಿಲ್ಲ. ಬಿಜೆಪಿ ಸಂಸ್ಥಾಪನೆಯಾದಗಿನಿಂದಲೂ (1980)ಪಕ್ಷದ ಸದಸ್ಯರಾಗಿದ್ದ ಸಿಂಗ್ ಅವರನ್ನು ಎರಡು ಬಾರಿ ಪಕ್ಷದಿಂದ ಉಚ್ಚಾಟಿಸಲಾಗಿತ್ತು. 2009ರಲ್ಲಿ 'ಜಿನ್ನಾ–ಇಂಡಿಯಾ ಪಾರ್ಟಿಷನ್, ಇಂಡಿಪೆಂಡೆನ್ಸ್' ಹೆಸರಿನ ಪುಸ್ತಕ ಪ್ರಕಟಿಸಿದ್ದರು. ಇದಕ್ಕಾಗಿ ಸಿಂಗ್ ಅವರನ್ನು ಪಕ್ಷದಿಂದ ಉಚ್ಚಾಟಿಸಲಾಗಿತ್ತು. ಇದಾದ 10 ತಿಂಗಳಲ್ಲೇ ಅವರು ಪಕ್ಷಕ್ಕೆ ಮರಳಿದ್ದರು.

2014ರಲ್ಲಿ ಟಿಕೆಟ್ ದೊರೆಯದ ಕಾರಣಕ್ಕೆ ಪಕ್ಷದ ಆದೇಶವನ್ನು ಉಲ್ಲಂಘಿಸಿ, ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದ ಕಾರಣಕ್ಕೆ ಅವರನ್ನು ಉಚ್ಚಾಟಿಸಲಾಗಿತ್ತು. ಚುನಾವಣೆಯಲ್ಲಿ ಸಿಂಗ್ ಸೋತಿದ್ದರು. 1938ರ ಜನವರಿ 3ರಂದು ರಾಜಸ್ಥಾನದ ಬಾಡ್‌ಮೆರ್ ಜಿಲ್ಲೆಯ ಜಾಸೊಲ್ ಹಳ್ಳಿಯಲ್ಲಿ ಜನಿಸಿದ್ದ ಸಿಂಗ್, ಎಂಟು ವರ್ಷ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿದ್ದರು. ಅಟಲ್ ಬಿಹಾರಿ ವಾಜಪೇಯಿ ಹಾಗೂ ಬಿಜೆಪಿ ಹಿರಿಯ ನಾಯಕ ಎಲ್.ಕೆ.ಅಡ್ವಾಣಿ ಅವರಿಗೆ ಆಪ್ತರಾಗಿದ್ದ ಸಿಂಗ್, ಹಣಕಾಸು, ವಿದೇಶಾಂಗ ಹಾಗೂ ರಕ್ಷಣಾ ಸಚಿವಾಲಯದ ಜವಾಬ್ದಾರಿ ಹೊತ್ತಿದ್ದರು. 1980ರಲ್ಲಿ ರಾಜ್ಯಸಭೆಗೆ ಆಯ್ಕೆಯಾಗಿದ್ದ ಅವರು ಐದು ಅವಧಿಗೆ ರಾಜ್ಯಸಭೆ ಸದಸ್ಯರಾಗಿ, ನಾಲ್ಕು ಬಾರಿ ಸಂಸದರಾಗಿ ಆಯ್ಕೆಯಾಗಿದ್ದರು.

ಆಧಾರ:ಪ್ರಜಾವಾಣಿ, ದಿನಾಂಕ:28.09.2020